# ನಿಮ್ಮೊಡನೆ

## ‘ಇಂಗ್ಲಿಷ್ ಮಾಧ್ಯಮ’ ಮಂತ್ರದಂಡವಲ್ಲ!

> ಏಕರೂಪ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಒತ್ತುನೀಡುವ ಮೂಲಕ ಸರ್ಕಾರಿ–ಖಾಸಗಿ ಶಾಲೆಗಳ ನಡುವಣ ವ್ಯತ್ಯಾಸವನ್ನು ಅಳಿಸಬೇಕಿದ್ದ ಸರ್ಕಾರವೇ ಆ ಅಂತರವನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಹಂತಹಂತವಾಗಿ ಶಿಕ್ಷಣವನ್ನು ಖಾಸಗಿ ಕ್ಷೇತ್ರಕ್ಕೆ ಒಪ್ಪಿಸಲು ಸರ್ಕಾರ ನಡೆಸುತ್ತಿರುವ ತೆರೆಮರೆಯ ಪ್ರಯತ್ನ ಗುಟ್ಟಾಗಿಯೇನೂ ಉಳಿದಿಲ್ಲ.

ಶಾಲಾಭಿವೃದ್ಧಿ ಸಮಿತಿಗಳು ಬೇಡಿಕೆ ಸಲ್ಲಿಸಿದರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ವಿಭಾಗಗಳನ್ನು ಆರಂಭಿಸಲು ಸರ್ಕಾರ ಸಿದ್ಧ ಎಂದು ಪ್ರೌಢ ಹಾಗೂ ಪ್ರಾಥಮಿಕ ಶಿಕ್ಷಣ ಸಚಿವ ತನ್ವೀರ್ ಸೇಟ್ ಹೇಳಿದ್ದಾರೆ. ಸಾರ್ವಜನಿಕರ ಅೀಕ್ಷೆಗೆ ಸ್ಪಂದಿಸುವ ಜನಪರ ಸರ್ಕಾರದ ಪ್ರತಿಕ್ರಿಯೆಯಂತೆ ಸಚಿವರ ಹೇಳಿಕೆ ಮೇಲ್ನೋಟಕ್ಕೆ ಕಾಣಿಸಿದರೂ, ಶಿಕ್ಷಣ ನೀತಿಯ ಕುರಿತಂತೆ ಸರ್ಕಾರಕ್ಕೊಂದು ಸ್ಪಷ್ಟ ನೀತಿ ಇಲ್ಲದಿರುವುದನ್ನೂ ಅದು ಸೂಚಿಸುವಂತಿದೆ. ಬೇಡಿಕೆಗೆ ತಕ್ಕಂತೆ ಸರಕು ಪೂರೈಸಲು ಸಿದ್ಧವಾಗಿರುವ ವ್ಯಾಪಾರಿ ಉತ್ಸಾಹವೂ ಸಚಿವರ ಮಾತಿನಲ್ಲಿದೆ.

ಸರ್ಕಾರಿ ಶಾಲೆಗಳಿಗೆ ಇಂಗ್ಲಿಷ್ ವಿಭಾಗವನ್ನು ಕಸಿ ಮಾಡುವ ಪ್ರಯತ್ನ ಇದು ಹೊಸತೇನಲ್ಲ. 2007–08ರಿಂದಲೇ ಇಂಗ್ಲಿಷ್ ಭಾಷೆಯನ್ನು ಒಂದನೇ ತರಗತಿಯಿಂದ ಒಂದು ವಿಷಯವಾಗಿ ಕಲಿಸಲಾಗುತ್ತಿದೆ. 3770 ಸರ್ಕಾರಿ ಶಾಲೆಗಳು ಇಂಗ್ಲಿಷ್ ವಿಭಾಗಗಳನ್ನೂ ಹೊಂದಿವೆ. ಈ ಸಂಖ್ಯೆಯನ್ನು ಮತ್ತಷ್ಟು ವಿಸ್ತರಿಸಲು ಸರ್ಕಾರ ಬಯಸುತ್ತಿರುವಂತಿದೆ. ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ‘ಇಂಗ್ಲಿಷ್ ಮಂತ್ರ’ವನ್ನು ಪಠಿಸುತ್ತಿದೆ. ಆದರೆ, ಈಗಾಗಲೇ ನಡೆದಿರುವ ಇಂಗ್ಲಿಷೀಕರಣದಿಂದ ಸರ್ಕಾರಿ ಶಾಲೆಗಳಲ್ಲಿನ ಮಕ್ಕಳ ಸಂಖ್ಯೆ ಎಷ್ಟು ಹೆಚ್ಚಾಗಿದೆ ಎನ್ನುವ ಪ್ರಶ್ನೆಯನ್ನು ಸರ್ಕಾರ ಕೇಳಿಕೊಂಡಂತಿಲ್ಲ. ಯಾವ ಯಾವುದೋ ನೆಪಗಳನ್ನು ಹೇಳಿ ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಇಂಗ್ಲಿಷ್ ಕಲಿಕೆಯ ಆಮಿಷವನ್ನು ತೋರಿಸಿದ ನಂತರವೂ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಹೆಚ್ಚದಿರುವುದನ್ನು ನೋಡಿದರೆ, ಇಂಗ್ಲಿಷ್ ಕಲಿಕೆಗೂ ಮಕ್ಕಳ ಹಾಜರಾತಿಗೂ ಸಂಬಂಧ ಇಲ್ಲವೆನ್ನುವುದು ಸ್ಪಷ್ಟವಾಗಿದೆ.

ಸರ್ಕಾರಿ ಶಾಲೆಗಳು ಪೋಷಕರ ವಿಶ್ವಾಸವನ್ನು ಕಳೆದುಕೊಂಡಿರುವುದು ಹಾಗೂ ಅಂಥದೊಂದು ಸ್ಥಿತಿಯನ್ನು ಸರ್ಕಾರವೇ ಸೃಷ್ಟಿಸಿರುವುದು ಮಕ್ಕಳು ಖಾಸಗಿ ಶಾಲೆಗಳತ್ತ ಮುಖ ಮಾಡಲು ಕಾರಣವಾಗಿದೆ. ಅನೇಕ ಸರ್ಕಾರಿ ಶಾಲೆಗಳಿಗೂ ದನಗಳನ್ನು ಕೂಡುವ ದೊಡ್ಡಿಗೂ ಹೆಚ್ಚಿನ ವ್ಯತ್ಯಾಸವೇನಿಲ್ಲ. ಶಿಥಿಲ ಕಟ್ಟಡಗಳಲ್ಲಿ ತರಗತಿಗಳು ನಡೆಯುತ್ತಿರುವ ಶಾಲೆಗಳೂ ಇವೆ. ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಡವಾಗಿರುವ ಈ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ಯಾವ ಪೋಷಕರಿಗೆ ತಾನೆ ಮನಸ್ಸು ಬಂದೀತು? ಸರ್ಕಾರದ ನಿರ್ಲಕ್ಷ್ಯದಿಂದಾಗಿಯೇ ಪೋಷಕರು ದುಬಾರಿ ಶುಲ್ಕವನ್ನು ತೆತ್ತು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ. ಏಕರೂಪ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಒತ್ತುನೀಡುವ ಮೂಲಕ ಸರ್ಕಾರಿ–ಖಾಸಗಿ ಶಾಲೆಗಳ ನಡುವಣ ವ್ಯತ್ಯಾಸವನ್ನು ಅಳಿಸಬೇಕಿದ್ದ ಸರ್ಕಾರವೇ ಆ ಅಂತರವನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಹಂತಹಂತವಾಗಿ ಶಿಕ್ಷಣವನ್ನು ಖಾಸಗಿ ಕ್ಷೇತ್ರಕ್ಕೆ ಒಪ್ಪಿಸಲು ಸರ್ಕಾರ ನಡೆಸುತ್ತಿರುವ ತೆರೆಮರೆಯ ಪ್ರಯತ್ನ ಗುಟ್ಟಾಗಿಯೇನೂ ಉಳಿದಿಲ್ಲ. ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ, ‘ಆಟದ ಮೈದಾನ ಹಾಗೂ ಶಿಕ್ಷಕರಿಗೆ ನಿರ್ದಿಷ್ಟ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ನಿಯಮಗಳನ್ನು ಸದ್ದಿಲ್ಲದೆ ಬದಲಾಯಿಸಲಾಗಿದೆ’ ಎಂದು ಮಕ್ಕಳ ಹಕ್ಕುಗಳ ತಜ್ಞ ವಾಸುದೇವ ಶರ್ಮ ಅವರು ಆರೋಪಿಸಿರುವುದು ಸರ್ಕಾರದ ನೈತಿಕತೆಯ ಕುರಿತು ಅನುಮಾನ ಮೂಡಿಸುವಂತಿದೆ.

ಸರ್ಕಾರಿ ಶಾಲೆಗಳ ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ವ್ಯವಸ್ಥೆಯೂ ನಮ್ಮಲ್ಲಿಲ್ಲ. ಮಕ್ಕಳಿಗೆ ಕಲಿಸುವುದರ ಜೊತೆಗೆ, ಶಿಕ್ಷಣೇತರ ಚಟುವಟಿಕೆಗಳಿಗೂ ಶಿಕ್ಷಕರು ತಮ್ಮ ಸಮಯವನ್ನು ಹೊಂದಿಸಿಕೊಳ್ಳುವ ಅನಿವಾರ್ಯತೆಯನ್ನು ಸರ್ಕಾರವೇ ಸೃಷ್ಟಿಸುತ್ತದೆ. ಈಚಿನ ವರ್ಷಗಳಲ್ಲಿ ಬೇರೆ ಬೇರೆ ಕಾರಣಗಳನ್ನು ನೀಡಿ, ದಸರೆ–ಬೇಸಿಗೆ ರಜೆಗಳನ್ನು ಕೂಡ ಕಸಿದುಕೊಳ್ಳುತ್ತಿರುವುದು ಶಿಕ್ಷಕರು ಮಾನಸಿಕವಾಗಿ– ದೈಹಿಕವಾಗಿ ದಣಿಯಲು ಕಾರಣವಾಗುತ್ತಿದೆ.

ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಮಾಧ್ಯಮವನ್ನು ಅನುಷ್ಠಾನಗೊಳಿಸುವ ವಿಷಯದಲ್ಲಿ ಕೂಡ ಸರ್ಕಾರದ ಇಚ್ಛಾಶಕ್ತಿ ಪ್ರಶ್ನಾರ್ಹ. ಶಿಕ್ಷಣ ಮಾಧ್ಯಮದ ಆಯ್ಕೆಯ ಹಕ್ಕನ್ನು ಪೋಷಕರಿಗೆ ಬಿಟ್ಟುಕೊಡಬೇಕು ಎನ್ನುವ ಸುಪ್ರೀಂಕೋರ್ಟ್ ಆದೇಶಕ್ಕೆ ಪರಿಹಾರ ಕಂಡುಕೊಳ್ಳುವ ಪ್ರಯತ್ನವೇ ನಡೆದಂತಿಲ್ಲ. ಇಂಗ್ಲಿಷ್ ಮಾಧ್ಯಮ ಶಾಲೆಗಳ ಮೇಲೆ ನಿಯಂತ್ರಣ ಹೊಂದುವುದು ಕೂಡ ಸಾಧ್ಯವಾಗಿಲ್ಲ. ‘ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ’ಯಡಿ ಪ್ರವೇಶ ಪಡೆದ ಮಕ್ಕಳಿಂದಲೂ ಕೆಲವು ಖಾಸಗಿ ಶಾಲೆಗಳು ಹಣ ವಸೂಲು ಮಾಡಿರುವುದು ವರದಿಯಾಗಿದೆ. ಶೇ.100ರ ಸಾಧನೆ ತೋರಿಸಲು, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಶಾಲೆಯಿಂದಲೇ ಹೊರಹಾಕುವ ಪ್ರತಿಷ್ಠಿತ ಶಾಲೆಗಳ ಸೊಕ್ಕು ಮುಂದುವರಿದೇ ಇದೆ. ಇನ್ನು ಮುಂದಾದರೂ ಸರ್ಕಾರಿ ಶಾಲೆಗಳಿಗೆ ಜೀವತುಂಬುವ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಬೇಕಿದೆ. ಅದನ್ನು ಬಿಟ್ಟು, ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದ ಮಾತನ್ನಾಡುವುದು ತನ್ನ ವೈಫಲ್ಯವನ್ನು ಮುಚ್ಚಿಕೊಳ್ಳಲು ಯತ್ನಿಸುವ ಸೋಗಲಾಡಿತನವಲ್ಲದೆ ಬೇರೇನಲ್ಲ.

■ ರಘುನಾಥ ಚ.ಹ.




ಶಿಲ್ಪಾ ಕಬ್ಬಿಣಕಂತಿ